



ಲಭ್ಯ. ಸ್ವಾತಂತ್ರ್ಯೋತ್ಸವ ನೆಪದಲ್ಲಿ ಕೇಸರಿ, ಬಿಳಿ, ಹಸಿರು ಬಣ್ಣದ ಸಿಲ್ಕ್ ಥ್ರೆಡ್‌ನ್ನು ಬಳಸಿಕೊಂಡು ಮಾಡಿದಂತಹ ಜುಮ್ಕಾ, ಚಾಂದಬಾಲಿ, ಸ್ಟಡ್... ಮುಂತಾದವು ಧರಿಸಿಕೊಂಡರೆ ಆಕರ್ಷಕವೂ ಆಗಿರುತ್ತದೆ.

ಇದನ್ನು ಎಲ್ಲಾ ರೀತಿಯ ಉಡುಪುಗಳ ಜೊತೆ ಬಳಸಬಹುದು. ಇದರ ಜೊತೆಗೆ ಸಿಲ್ಕ್ ಥ್ರೆಡ್ ಬ್ಯಾಗ್ ಕೂಡ ಜನಪ್ರಿಯವಾಗುತ್ತಿದೆ. ಇವಲ್ಲದೆ ಪೇಪರ್ ಜ್ಯುವೆಲ್ಲರಿ, ಟೆರಾಕೋಟ್ ಜ್ಯುವೆಲ್ಲರಿ ಕೂಡ ಆಭರಣ ಪ್ರಿಯರ ಆಯ್ಕೆಗೆ ಲಭ್ಯವಿದೆ. ಕೇಸರಿ ಬಿಳಿ ಹಸುರು ಬಣ್ಣದ ಸಲ್ವಾರ್, ಫ್ರಾಕ್ ಅಥವಾ ಸೀರೆ ಜೊತೆಗೆ ಇದೇ ವರ್ಣದ ಒಡವೆಗಳನ್ನು ಧರಿಸಬಹುದು. ಇದು ರಾಷ್ಟ್ರಪ್ರೇಮ ಬೆಳೆಸಲು ಸಹಕಾರಿ. ಇದೀಗ ಫ್ಯಾಷನ್ ಪ್ರಿಯರಿಗಾಗಿ ನೇಲ್ ಆರ್ಟ್ ಡಿಸೈನ್‌ಗಳೂ ಲಭ್ಯವಿದ್ದು, ಮೇಕಪ್‌ನಲ್ಲೂ ಹೊಸತನ, ತಾಜಾತನ ಉಳಿಸಿಕೊಳ್ಳಲು ಸಹಕಾರಿ.

ಉಗುರುಗಳ ಮೇಲೆ ತ್ರಿವರ್ಣ ಚಿತ್ತಾರ ಉಡುಪು, ಒಡವೆ ಜೊತೆಗೆ ಎಲಿಗೆಂಟ್ ಲುಕ್ ಕೊಡಲು ಸಹಾಯಕ. ಇದಘ ಫ್ಯಾಷನ್ ಪ್ರಿಯರ ನವಿರಾದ ಉಗುರುಗಳ ಮೇಲೆ ತ್ರಿವರ್ಣ ರಂಗಿನ ಚಿತ್ತಾರ ಸಖತ್ ಆಗಿ ಮಿಂಚುತ್ತಿದೆ.

ಸ್ವಾತಂತ್ರ್ಯೋತ್ಸವ ನೆಪದಲ್ಲಿ ನೇಲ್ ಆರ್ಟ್ ಡಿಸೈನರ್‌ಗಳು ಈ ಬಾರಿ ನೂತನ ಸ್ಟೈಲ್ ಸ್ಟೇಟ್‌ಮೆಂಟ್ ಬಿಂಬಿಸುವ ತ್ರೀ ಶೇಡ್ಸ್ ಹಾಗೂ ಮಿಕ್ಸ್ ಅಂಡ್ ಮ್ಯಾಚ್ ಆಧಾರಿತ ಥೀಮ್ ಪರಿಚಯಿಸಿದ್ದು, ಫ್ಯಾಷನ್ ಪ್ರಿಯರ ಮನತಣಿಸುತ್ತಿದೆ.

## ರಾಷ್ಟ್ರೀಯ ಹಬ್ಬಕ್ಕೆ ಖಾದಿ ಸೀರೆ

ಸಾಮಾನ್ಯವಾಗಿ ಸ್ವಾತಂತ್ರ್ಯ ದಿನ, ಗಾಂಧಿಜಯಂತಿಗಳಂತಹ ರಾಷ್ಟ್ರೀಯ ಹಬ್ಬಗಳಂದು ಮಹಿಳೆಯರು ಖಾದಿ ಸೀರೆಗಳಿಗೆ ಮೊರೆಹೋದರೆ ಪುರುಷರು ಖಾದಿ ಪಂಚೆ, ಜುಬ್ಬ ತೊಟ್ಟು ರಾಷ್ಟ್ರಪ್ರೇಮ ಮೆರೆಯುವುದಿದೆ. ಸೀರೆಗಳಲ್ಲಿ ರೇಷ್ಮೆ ಸೀರೆಗೆ ಅಗ್ರಪಟ್ಟ ಇದ್ದರೂ ಖಾದಿ ಸೀರೆಗೆ ಬೇಡಿಕೆ ದಿನೇ ದಿನೇ ಹೆಚ್ಚುತ್ತಿದೆ. ವಯಸ್ಸಾದ ಮುದುಕಿಯರು ಖಾದಿ ಸೀರೆ ಉಡುತ್ತಾರೆ ಎಂಬ ಭಾವನೆಯನ್ನು ಹಿಂದಕ್ಕೆ ತಳ್ಳಿ ಈಗ ಯುವತಿಯರೂ, ಫ್ಯಾಷನೆಬಲ್ ಮಹಿಳೆಯರು, ಹುಡುಗಿಯರು, ಸಿನಿಮಾ ತಾರೆಯರು ಖಾದಿ ಸೀರೆಯತ್ತ ಒಲವು ತೋರಲಾರಂಭಿಸಿದ್ದಾರೆ.

ಹದಿ ವಯಸ್ಸಿನ ಹುಡುಗಿಯರಿಂದ ಹಿಡಿದು ಫ್ಯಾಷನ್ ಬಯಸುವ ಅಜ್ಜಯವರೆಗೂ ಖಾದಿ ಉಡುಗೆ ಇಷ್ಟಪಡುತ್ತಾರೆ, ಪಶ್ಚಿಮ ಬಂಗಾಳ, ಛತ್ತೀಸ್‌ಗಡ ಮುಂತಾದ ರಾಜ್ಯಗಳಲ್ಲಿ ಅತ್ಯುತ್ತಮ ಗುಣಮಟ್ಟದ ಖಾದಿ ಸಿಗುತ್ತದೆ. ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ ಖಾದಿಯಿಂದ ನೇಯ್ದ ಸೀರೆ, ಕೈಮಗ್ಗದ ಸಲ್ವಾರ್‌ಗಳು ಹೊಸ ಆಕರ್ಷಕ ಮಾದರಿಗಳಲ್ಲಿ ಸಿಗುತ್ತದೆ. ಆಧುನಿಕ ಜೀವನಶೈಲಿಗೆ ಒಗ್ಗುವಂತೆ ಖಾದಿ ಉಡುಗೆ ಇದೀಗ ಮಾರುಕಟ್ಟೆಯಲ್ಲಿ ಲಭ್ಯ.

'ಖಾದಿ ಬಟ್ಟೆ ಮೊದಲ ಬಾರಿಗೆ ಒಗೆದಾಗ ಹಿಂಜಿದಂತೆ ಆಗುತ್ತದೆ. ಇದನ್ನು ತಪ್ಪಿಸಲು ಒಗೆದು, ಡ್ರೈ ಮಾಡಿ ಕುದಿ ಅಳತೆ ತಪ್ಪದಂತೆ ಮಾಡಲಾಗುತ್ತದೆ. ನುರಿತ ಬಟ್ಟೆ ಕೆಲಸಗಾರರು ಇದನ್ನು ಮಾಡುತ್ತಾರೆ. ಗುಣಮಟ್ಟದ ಖಾದಿ ಬಟ್ಟೆ ಎಷ್ಟೇ ದಿನಗಳಾದರೂ ಬಣ್ಣ ಮಾಸುವುದಿಲ್ಲ, ಅಂದಗೆಡುವುದಿಲ್ಲ' ಎನ್ನುತ್ತಾರೆ ಖಾದಿ ಸೀರೆ ಮಳಿಗೆಯ ವರ್ತಕಿ ಬೆಂಗಳೂರಿನ ಸೀಮಾ ಮುಜುಂದಾರ್.

'ಸೀರೆ ಮಾತ್ರವಲ್ಲದೆ ಚೂಡಿದಾರ್, ಕುರ್ತಾ, ಜುಬ್ಬಾ, ಲುಂಗಿ, ಬೆಡ್‌ಸ್ಪ್ರೆಡ್, ಬೆಡ್‌ಶೀಟ್‌ಗಳನ್ನೂ ಬಳಸಲಾಗುತ್ತದೆ. ಒಗೆದಷ್ಟೂ ತೆಳುವಾಗುವ, ಹಗುರವಾಗುವ ಈ ಬಟ್ಟೆ ಗುಣಮಟ್ಟದಲ್ಲಿ ಇನ್ನೂ ಉತ್ತಮವಾಗುತ್ತಾ ಹೋಗುತ್ತದೆ. ಒಂದು ಸೀರೆ ತಯಾರಾಗಬೇಕಾದರೆ ನೇಕಾರರ ಶ್ರಮ ವಿಪರೀತ. ಹೀಗಾಗಿ ಇದಕ್ಕೆ ತೆರುವ ಬೆಲೆ ದುಬಾರಿ ಎನಿಸಲಾರದು. ಉಳಿದ ಬಟ್ಟೆಯಿಂದ ಕೈಚೀಲ, ಕುಶನ್ ಕವರ್, ಕುಚ್ಚು ಮುಂತಾದವನ್ನು ತಯಾರಿಸಬಹುದು' ಎನ್ನುತ್ತಾರೆ ಅವರು.

ಖಾದಿ ಉಡುಪಿಗೆ ಕಾಲದ ಹಂಗಿಲ್ಲ. ಎಲ್ಲ ಕಾಲಕ್ಕೂ ಸೂಕ್ತವಾಗುವ, ಎಲ್ಲ ವಯೋಮಾನಕ್ಕೂ ಒಪ್ಪುವ, ಫ್ಯಾಷನ್‌ಗೂ ಸಂಪ್ರದಾಯಕ್ಕೂ ಸೈ ಎನ್ನುವ ಉಡುಪು ಖಾದಿ. ಸಿಂಥೆಟಿಕ್ ಸೀರೆ, ಉಡುಪು ಕೆಲವೊಮ್ಮೆ ಔಟ್‌ಡೇಟೆಡ್ ಆಗುವುದುಂಟು. ಆದರೆ ಖಾದಿ ಮತ್ತು ರೇಷ್ಮೆ ಎಂದಿಗೂ ಔಟ್ ಆಫ್ ಫ್ಯಾಷನ್ ಆಗುವುದೇ ಇಲ್ಲ ಎಂಬುದು ಫ್ಯಾಷನ್ ತಜ್ಞರ ಅಭಿಮತ. ಜತೆಗೆ ಬಡವರಿಂದ ಹಿಡಿದು ಶ್ರೀಮಂತರ ವರೆಗೆ ಯಾರು ಬೇಕಾದರೂ ಖಾದಿ ಬಟ್ಟೆ ಧರಿಸಿ ಖುಷಿ ಪಡಬಹುದು. ಏಕೆಂದರೆ ಬಡವರಿಗೂ ಖಾದಿ ಉಡುಪು ಕೈಗೆಟುಕುವಂತಿದೆ. ಇದರಲ್ಲಿ ತರಾವರಿ ಬೆಲೆಯ ಉಡುಗೆ ತೊಡುಗೆ ಸಿಗುವುದರಿಂದ ಯಾರು ಬೇಕಾದರೂ ಇದನ್ನು ಕೊಳ್ಳಬಹುದು. ■

